# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **194** |
| ಉತ್ತರಿಸಬೇಕಾದ ದಿನಾಂಕ | : | 28.01.2026 |
| ಉತ್ತರಿಸಬೇಕಾದ ಸಚಿವರು | : | ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ವಸತಿ ರಹಿತರ ಸಂಖ್ಯೆ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಹೌದು.<br>ರಾಜ್ಯದಲ್ಲಿ ಗ್ರಾಮೀಣ ಪ್ರದೇಶದಲ್ಲಿ 2018-19ರಲ್ಲಿ ಹಾಗೂ ನಗರ ಪ್ರದೇಶದಲ್ಲಿ 2016-17ರಲ್ಲಿ ವಸತಿ/ನಿವೇಶನರಹಿತರ ಸಮೀಕ್ಷೆ ಕೈಗೊಳ್ಳಲಾಯಿತು. ಅದರನ್ವಯ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಕಂಡು ಬಂದಿರುವ ವಸತಿ/ನಿವೇಶನರಹಿತರ ವಿವರ ಈ ಕೆಳಗಿನಂತಿದೆ:<br><br>ಗ್ರಾಮೀಣ ಪ್ರದೇಶ:
<table>
<tr><th>ಜಿಲ್ಲೆ</th><th>ವಸತಿ ರಹಿತರು</th><th>ನಿವೇಶನ ರಹಿತರು</th><th>ಒಟ್ಟು</th></tr>
<tr><td>ಮೈಸೂರು</td><td>69989</td><td>40429</td><td>110418</td></tr>
<tr><td>ಚಾಮರಾಜನಗರ</td><td>46111</td><td>37149</td><td>83260</td></tr>
<tr><td>ಒಟ್ಟು</td><td>116100</td><td>77578</td><td>193678</td></tr>
</table>
ನಗರ ಪ್ರದೇಶ:
<table>
<tr><th>ಜಿಲ್ಲೆ</th><th>ವಸತಿ ರಹಿತರು</th><th>ನಿವೇಶನ ರಹಿತರು</th><th>ಒಟ್ಟು</th></tr>
<tr><td>ಮೈಸೂರು</td><td>19552</td><td>59884</td><td>79436</td></tr>
<tr><td>ಚಾಮರಾಜನಗರ</td><td>5047</td><td>10064</td><td>15111</td></tr>
<tr><td>ಒಟ್ಟು</td><td>24599</td><td>69948</td><td>94547</td></tr>
</table>
ಮುಂದಿನ ದಿನಗಳಲ್ಲಿ ಆಯವ್ಯಯದಲ್ಲಿ ನಿಗಧಿಪಡಿಸಬಹುದಾದ ಹೊಸ ಮನೆಗಳ ಗುರಿ ಅನುಗುಣವಾಗಿ ಗ್ರಾಮ ಪಂಚಾಯತಿವಾರು/ ಸ್ಥಳೀಯ ಸಂಸ್ಥೆಗಳವಾರು ಮನೆಗಳ ಗುರಿ ನಿಗಧಿಪಡಿಸಿ ಸರ್ಕಾರದಿಂದ ಹಂತ ಹಂತವಾಗಿ ಎಲ್ಲಾ ಅರ್ಹ ವಸತಿರಹಿತರಿಗೆ ವಸತಿ ಸೌಕರ್ಯ ಒದಗಿಸಲು ಕ್ರಮವಹಿಸಲಾಗುತ್ತದೆ.</td></tr>
<tr><td>ಆ)</td><td>ಈ ಜಿಲ್ಲೆಗಳಲ್ಲಿ ನಿವೇಶನ ಹಂಚಿಕೆಗಾಗಿ ಎಷ್ಟು ಎಕರೆ ಸರ್ಕಾರಿ ಭೂಮಿಯನ್ನು ಗುರುತಿಸಲಾಗಿದೆ; ಸರ್ಕಾರಿ ಭೂಮಿ ಲಭ್ಯವಿಲ್ಲದ ಕಡೆ ಖಾಸಗಿ ಜಮೀನು ಖರೀದಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;</td><td>ಅರ್ಹ ಕುಟುಂಬಗಳಿಗೆ ನಿವೇಶನ ಹಂಚಿಕೆ ಮಾಡಲು ಸರ್ಕಾರಿ ಜಮೀನಿಗೆ ಆದ್ಯತೆ ನೀಡಲಾಗಿದ್ದು, ಸ್ಥಳೀಯವಾಗಿ ಲಭ್ಯವಿರುವ ಜಮೀನನ್ನು ಜಿಲ್ಲಾಧಿಕಾರಿಗಳಿಂದ ಮಂಜೂರು ಮಾಡಿಕೊಂಡು ಬಳಸಿಕೊಳ್ಳಬಹುದಾಗಿದೆ. ಗ್ರಾಮೀಣ ಮತ್ತು ನಗರ ನಿವೇಶನ ಯೋಜನೆಗೆ ಗುರುತಿಸಿ ಕಾಯ್ದಿರಿಸಿರುವ ಜಮೀನಿನ ವಿವರ ಈ ಕೆಳಗಿನಂತಿದೆ.
<table>
<tr><th>ಜಿಲ್ಲೆ</th><th>ಪ್ರದೇಶ</th><th>ವಿಸ್ತೀರ್ಣ(ಎ/ಗುಂ)</th></tr>
<tr><td rowspan="2">ಚಾಮರಾಜನಗರ</td><td>ನಗರ</td><td>23.99</td></tr>
<tr><td>ಗ್ರಾಮೀಣ</td><td>38.385</td></tr>
<tr><td rowspan="2">ಮೈಸೂರು</td><td>ನಗರ</td><td>40.085</td></tr>
<tr><td>ಗ್ರಾಮೀಣ</td><td>45.93</td></tr>
<tr><td colspan="2">ಒಟ್ಟು</td><td>148.39</td></tr>
</table>
ಸರ್ಕಾರಿ ಜಮೀನು ಲಭ್ಯವಿಲ್ಲದ ಕಡೆಗಳಲ್ಲಿ ಮಾತ್ರ ವಸತಿಗೆ ಸೂಕ್ತ ಖಾಸಗಿ ಜಮೀನು ಖರೀದಿಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಜಿಲ್ಲಾ ಜಮೀನು ಖರೀದಿ ಸಮಿತಿ ಮೂಲಕ ಕ್ರಮವಹಿಸಲಾಗುತ್ತಿದೆ.<br><br>ಸರ್ಕಾರದ ಆದೇಶ ಸಂಖ್ಯೆ: ವಇ 33 ಹೆಚ್‌ಎಹೆಚ್ 2016 (ಭಾ 2), ದಿನಾಂಕ: 12.07.2016 ರಲ್ಲಿ ಜಮೀನು ಖರೀದಿ ದರಗಳನ್ನು ಈ ಕೆಳಗಿನಂತೆ ನಿಗದಿಪಡಿಸಲಾಗಿದೆ.ವಿವರ ಕೆಳಕಂಡಂತಿದೆ.</td></tr>
</table>

| ಕ್ರ.ಸಂ | ಪ್ರದೇಶ | ಮಾರ್ಗಸೂಚಿ ಬೆಲೆ | ಗರಿಷ್ಟ ಮಿತಿ (ಪ್ರತಿ ಎಕರೆಗೆ) .ಲಕ್ಷಗಳಲಿ |
|---|---|---|---|
| 1 | ಗ್ರಾಮೀಣ | ಮಾರ್ಗಸೂಚಿ ಬೆಲೆಯ ನಾಲ್ಕು ಪಟ್ಟು | 9.00 |
| 2 | ಪಟ್ಟಣ ಪಂಚಾಯಿತಿ | ಮಾರ್ಗಸೂಚಿ ಬೆಲೆಯ ಮೂರು ಪಟ್ಟು (ಯಾವುದು ಕಡಿಮೆಯೋ ಅದು) | 12.00 |
| 3 | ಪುರಸಭೆ | | 15.00 |
| 4 | ನಗರಸಭೆ | | 22.5 |
| 5 | ಮಹಾನಗರ ಪಾಲಿಕೆ | | 37.50 |
| 6 | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | | 75.00 |

ಜಮೀನಿನ ಲಭ್ಯತೆ ಹಾಗೂ ನಿವೇಶನರಹಿತರ ಸಂಖ್ಯೆಗೆ ಅನುಗುಣವಾಗಿ ಹಂತ ಹಂತವಾಗಿ ನಿವೇಶನ ವಿತರಿಸಲು ಕ್ರಮವಹಿಸಲಾಗುತ್ತಿದ್ದು, ನಿವೇಶನ ಹಂಚಿಕೆಗೆ ಯಾವುದೇ ಕಾಲಮಿತಿ ಇರುವುದಿಲ್ಲ.

ಸಂಖ್ಯೆ: ವಇ 17 ಹೆಚ್‌ಎಎಂ 2026

**(ಬಿ.ಜೆಡ್. ಜಮೀರ್ ಅಹ್ಮದ್‌ಖಾನ್)**
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು